Ajjanahalli tank to the effect that the proposal would affect their interests adversely are also being examined.

(*d*) the matter is under consideration as indicated in the reply to (*c*).

ಶ್ರೀ ಬಿ. ಎಚ್. ರಾಮೇಗೌಡ.—ಈ ವರ್ಷ ಆ ಕೆರೆ ತುಂಬಿಯೂ ಸಹ ಬಹುಭಾಗದ ಜಮೀನು ಫಸಲು ಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

Increasing the capacity of Sira Doddakere and Sira Chikkakere.

Q.—878. **Sri B. N. RAME GOWDA** (Sira).—

Will the Government be pleased to state :—

(*a*) the units of water that will be stored in (i) Sira Doddakere, and (ii) Sira Chikkakere tanks of Sira Village of Sira Taluk :

(*b*) the total acreage of wet lands under cultivation under the above tanks ;

(*c*) by what extent the capacity of the tanks have to be increased to provide water for the entire acreage for at least one full summer crop (*i.e.*, six months storage of water) ;

(*d*) whether they will consider favourably the question of increasing the capacity of either of the above tanks and also the question of storing water in the adjoining '*kandaka*' of Sira Doddakere tank which will augment the water supply to the above lands ?

A.—**Sri Kadidal MANJAPPA** (Minister for Revenue and Public Works).—

(*a*) (i) 565 units, and
(ii) 79 units.

(*b*) (i) 845 acres, and
(ii) 116 acres.

(*c*) By about 25 per cent.

(*d*) The object would not be served, as there is no sufficient inflow to the tanks from their catchments.

Sri B. N. RAME GOWDA.—I have no supplementaries.

Gomal lands for fruit cultivation and agricultural purposes (Appeals to cancel grant).

Q.—1010. **Sm. B. L. SUBBAMMA** (Chikmagalur—Mudigere).—

Will the Government be pleased to state :—

(*a*) whether it has come to their notice that the grant of gomal for fruit cultivation and other agricultural purposes has caused inconvenience to the grazing of the cattle ;—

(*b*) whether the Revenue Minister has received any appeals praying for the cancellation of such gomal lands granted for cultivation ;

(*c*) if so, how many ?

A.—**Sri Kadidal MANJAPPA** (Minister for Revenue and Public Works).—

(*a*) No.

(*b*) and (*c*) The questions are too vague and general to answer.

ಶ್ರೀಮತಿ ಬಿ. ಎಲ್. ನುಬ್ಬಮ್ಮ.—ಕೆಲವು ಗೋಮಾಳ ಪ್ರದೇಶವನ್ನು ಹಣ್ಣಿನ ವ್ಯವಸಾಯ ಮತ್ತು ಇತರ ಉದ್ದೇಶಗಳಿಗಾಗಿ ಕೊಟ್ಟಿರುವುದರಿಂದ ತೊಂದರೆಯಾಗಿದೆಯೆಂಬ ಯಾವ ಅರ್ಜಿಗಳೂ ಸರ್ಕಾರಕ್ಕೆ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಅರ್ಜಿ ತಮ್ಮ ತಾಲ್ಲೂಕಿನಿಂದ ಬಂದಿದೆ.

ಶ್ರೀಮತಿ ಬಿ. ಎಲ್. ನುಬ್ಬಮ್ಮ.—ಎಷ್ಟು ಅರ್ಜಿಗಳು ಬಂದಿವೆ ?

ಶ್ರೀ ಕಡಿದಾಳ್ ಮಂಜಪ್ಪ.—ಒಂದೇ ಒಂದು ಬಂದಿರುವುದು ನನಗೆ ಜ್ಞಾಪಕ. ಇನ್ನೂ ಕೆಲವು ಬಂದಿದ್ದರೆ ಅಪೀಲಿಗೆ ಬಂದಿರಬಹುದು.

ಶ್ರೀಮತಿ ಬಿ. ಎಲ್. ನುಬ್ಬಮ್ಮ.—ದನಗಳ ಮೇಪಿಗೆ ತೊಂದರೆಯಾಗದ ರೀತಿಯಲ್ಲಿ ಈ ಗೋಮಾಳ ಜಮೀನು ಗಳನ್ನು ಕಾಪಾಡಿಕೊಂಡು ಬರಬೇಕೆಂದು ಸರ್ಕಾರದ ನೀತಿ ಇದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನೈಷ್ಪಾಗಿದೆ ; ಎಲ್ಲೆಲ್ಲಿ ಕಡಪೆ, ಗೋಮಾಳವಿದೆಯೋ ಅಲ್ಲಿ ಕೊಡ ಬಾರದು ಎಂದು ಇದೆ.

ಶ್ರೀಮತಿ ಬಿ. ಎಲ್. ನುಬ್ಬಮ್ಮ.—ನಮ್ಮ ಕಡೆ ಗೋಮಾಳ ಪ್ರದೇಶವನ್ನು ಬೇರೆ ವಿಧವಾಗಿ ಉಪ ಯೋಗಿಸಿಕೊಳ್ಳಲು ಅವಕಾಶ ಕೊಟ್ಟುದರ ದೆಶೆಯಿಂದ ಅದು ಬಂಜರುಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನನ್ನ ಮುಂದೆ ಇರ ತಕ್ಕ ಅರ್ಜಿಯ ವಿಚಾರ ಮಾತ್ರ ಹೇಳಬಲ್ಲೆ. ಬಾಕಿ ವಿಚಾರ ಗೊತ್ತಿಲ್ಲ.

ಶ್ರೀಮತಿ ಬಿ. ಎಲ್. ನುಬ್ಬಮ್ಮ.—ಗೋಮಾಳ ಜಮೀನಿನ ಬಗ್ಗೆ ಇನ್ನು ಮುಂದೆ ದರಖಾಸ್ತು ಬಂದರೆ ಅದನ್ನು ನಿಲ್ಲಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲೆಲ್ಲಿ ಕಡಮೆ ಗೋಮಾಳವಿದೆಯೋ ಆ ಪ್ರದೇಶವನ್ನು ಯಾವ ರೀತಿಯಲ್ಲಿಯೂ ಉಪಯೋಗಿಸದೆ ಕಾಪಾಡಿಕೊಂಡು ಬರುವ ಬಗ್ಗೆ ಈಗಾಗಲೇ ಅಧಿಕಾರಿಗಳಿಗೆ ನೂಚನೆ ಕೊಟ್ಟಿದೆ.

ಶ್ರೀ ಪೈ. ಎಂ. ಚಂದ್ರಶೇಖರಯ್ಯ.—ಸರ್ಕಾರದ ನೀತಿ ಮೊದಲಿನಿಂದಲೂ ಈ ವಿಚಾರದಲ್ಲಿ ಹೀಗೆಯೇ ಇದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇದೆ.

ಶ್ರೀ ಪೈ. ಎಂ. ಚಂದ್ರಶೇಖರಯ್ಯ.—ಈ ಬಗ್ಗೆ ವ್ಯತ್ಯಾಸವಾಗಿರುವುದನ್ನು ಗಮನಕ್ಕೆ ತಂದರೆ ಸರಿಪಡಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನು ಪ್ರಕಾರ ಮಾಡೋಣ.

ಶ್ರೀ ಜಿ. ಶಿವಪ್ಪ.—ಇಷ್ಟು ರಾಸುಗಳಿಗೆ ಇಷ್ಟು ಗೋಮಾಳವಿರಬೇಕೆಂಬ ನಿಯಮವಿದೆಯೇ ?

Mr. SPEAKER.—That is understood.

Sri M. LINGANNA.—May I know whether the Government have made arrangements to provide gomal for villages where there is no gomal ?

Sri Kadidal MANJAPPA.—If there is any other land available.

Sri M. LINGANNA.—In case where no lands are available, what is the alternative that the Government have thought of to provide sufficient ground for cattle there ?

Sri Kadidal MANJAPPA.—We cannot create lands where there is none.

Sri M. LINGANNA.—Do they not consider that it is the paramount duty to provide gomals in villages where lands are not found, in view of the fact that Government is interested in the improvement of the cattle wealth in the State ?

Sri Kadidal MANJAPPA.—However Government may be interested in the cattle wealth, we cannot create lands. If there is land available, we can convert these lands into gomal.

Sri M. LINGANNA.—Can the Government acquire lands and convert them into gomal in the same way as they are acquiring lands for village extension schemes, Sir ?

Sri Kadidal MANJAPPA.—That is a very big question. It is very difficult to answer and it is very difficult to implement the suggestion also.

Sri B. T. KEMPA RAJ.—Is it not a fact that party strife has led to the liquidation of gomals in many villages?

Sri Kadidal MANJAPPA.—Strife will be there wherever there is a party.

Sri B. T. KEMPA RAJ.—Are not these gomals barren lands, Sir ?

Mr. SPEAKER.—That was answered some ten days back.

Sri B. T. KEMPA RAJ.—Has the Government chalked out any scheme to see that these gomals will be taken up for growing grass, Sir ?

Mr. SPEAKER.—That was also answered.

ಶ್ರೀ ಎಸ್. ಎಂ. ಮರಿಯಪ್ಪ.—ಗೋಮಾಳವಿಲ್ಲದೇ ಇರುವ ಕಡೆ ಅಮೃತಮಹಲ್ ಕಾವಲನ್ನು ಗೋಮಾಳವಾಗಿ ಪರಿಗಣಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಧ್ಯವಿದ್ದರೆ, ಅಮೃತಮಹಲ್ ಕಾವಲು ಜಾಸ್ತಿ ಇದ್ದರೆ ಮಾಡ ಬಹುದು

ಶ್ರೀ ಎಸ್. ಎಂ. ಮರಿಯಪ್ಪ.—ಹತ್ತಾರು ವರ್ಷ ಗಳಿಂದ ಅಮೃತಮಹಲ್ ಕಾವಲು ಎಂದು ಹೆಸರಿಗೆ ಮಾತ್ರ ಇದೆಯೇ ಹೊರತು ಅಮೃತಮಹಲ್ ತಳಿಗಳು ಅಲ್ಲಿಲ್ಲ. ಅವನ್ನು ಗೋಮಾಳ ಎಂದು ಹೇಳಿ ಪರಿಗಣಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ತಿಂಗಳ ಕೆಳಗೆ ಅಮೃತಮಹಲ್ ಕಾವಲಿನ ಮುಖ್ಯಾಧಿಕಾರಿಗಳನ್ನೂ ಮತ್ತು ಇನ್ನೂ ಕೆಲವರನ್ನೂ ಬರಮಾಡಿಕೊಂಡು ಈ ವಿಚಾರದಲ್ಲಿ ಚರ್ಚೆಮಾಡಿದೆ ಈಗಿರತಕ್ಕ ಅಮೃತ ಮಹಲ್ ಇಲಾಖೆಯ ಆಡಳಿತಕ್ಕೆ ಒಳಪಟ್ಟ ಜಮೀನೆಲ್ಲಾ ಆ ಇಲಾಖೆಗೆ ಸೇರಿದ ಜಾನುವಾರುಗಳಿಗೆ ಬೇಕಾಗುತ್ತದೆ ಎಂದು ಅವರು ಅಭಿಪ್ರಾಯಪಡುತ್ತಾರೆ.

ಶ್ರೀ ಎಸ್. ಎಂ. ಮರಿಯಪ್ಪ.—ಈಗ ಅಮೃತ ಮಹಲ್ ಕಾವಲುಗಳನ್ನು ಸರ್ಕಾರ ದನಗಳು ಮೇಯ್ಯುವುದಕ್ಕೆ ಎಂದು ಬಿಡಿಸಿಕೊಂಡಿದ್ದೀರಿ. ಈಗ ಈ ಸರ್ಕಾರಿ ದನಗಳು ಇರುವುದಕ್ಕಿಂತ ಜಾಸ್ತಿ ಲೆಕ್ಕದಲ್ಲಿ ಈ ಅಮೃತಮಹಲ್ ಕಾವಲು ದೇಶಾದ್ಯಂತ ಇಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಜಾಸ್ತಿ ಇದೆ ಎಂದು ಹೇಳಿ ಅವರ ಅಭಿಪ್ರಾಯ ಇಲ್ಲ.

ಶ್ರೀ ಎಸ್. ಎಂ. ಮರಿಯಪ್ಪ.—ನೂರು ರಾಸುಗಳಿಗೆ 30 ಎಕರೆ ಗೋಮಾಳ ಇರಬೇಕು ಎಂದು ಹೇಳಿದ್ದೀರಿ. ಅದರಂತೆ ಅಮೃತಮಹಲ್ ಕಾವಲು ಜಾಸ್ತಿ ಇದ್ದರೆ ಬಿಟ್ಟುಕೊಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅಮೃತಮಹಲ್ ಕಾವಲಿಗೆ ಸಂಬಂಧಪಟ್ಟಂತೆ ಆ ಲೆಕ್ಕಾಚಾರ ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಶಿವನಂಜೇಗೌಡ.—ಗೋಮಾಳ ಇಲ್ಲದೇ ಇರುವಕಡೆ ಗೋಮಾಳ ಕೊಡುತ್ತೇವೆ ಎಂದು ಹೇಳಿದ್ದೀರಿ. ಈಗ ಮೈನೂರು ತಾಲ್ಲೂಕಿನ ಒಂದು ಊರಿನಲ್ಲಿ ಒಂದು ಎಕರೆಯಷ್ಟು ಗೋಮಾಳ ಇಲ್ಲ, ಗೋಮಾಳ ಬೇಕು, ಗೋಮಾಳ ಬಿಡಿ ಎಂದು ತಕರಾರು ಮಾಡುತ್ತಾ ಇದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅನೇಕ ಕೇಸುಗಳು ನಮ್ಮ ಮುಂದೆ ಇರಬಹುದು, ಯಾವುದು ಎಂದು ಹೇಳುವುದಕ್ಕಾಗುವುದಿಲ್ಲ, ನೆನಪಿಲ್ಲ.

ಶ್ರೀ ಶಿವನಂಜೇಗೌಡ.—ಊರ ಮುಂಭಾಗದಲ್ಲಿರ ತಕ್ಕ ಜಮೀನು ಜಾನುವಾರುಗಳಿಗೆ ಬೇಕು ಎಂದು ಇರುವಾಗ ಅದನ್ನು ನನಗೆ ಕೊಡಬೇಕು ಎಂದು ಕೇಳಿದರೆ ಅದು ಕೊಡತಕ್ಕದ್ದು ನ್ಯಾಯವೇ, ಸ್ವಾಮಿ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಊಹಾಪ್ರಶ್ನೆ.